ಬದಲಿಸಿಕೊಳ್ಳಲು ನೆರವಾಗುತ್ತಾರೆ. ಆ ಯುವತಿ ಮದುವೆಯಾಗಿ ಕುಟುಂಬ ಕಟ್ಟಿಕೊಳ್ಳುತ್ತಾಳೆ.

‘ರುಕ್ಮಿಣಿಬಾಯಿಯ ಮಗಳು ಇಂದು’ ಪ್ರಸಂಗದಲ್ಲಿ ಗಂಡನ ಮನೆಯವರ ವರ್ತನೆಯಿಂದ ಗಾಸಿಗೊಳಗಾದ ಹುಡುಗಿಯ ಮನಸ್ಸನ್ನು ಪಳಗಿದ ಮಾನಸಿಕ ತಜ್ಞೆಯ ರೀತಿ ಲಲಿತಮ್ಮನವರು ಶಾಂತಗೊಳಿಸಿ, ಹುಡುಗನೊಂದಿಗೂ ಮಾತನಾಡಿ ಅವರ ಬದುಕನ್ನು ಸರಿಪಡಿಸುತ್ತಾರೆ. ಇವರ ಮಾತಿನ ಮೋಡಿಗೆ ಒಳಗಾಗಿ ಕೇಡಿ ರಂಗಪ್ಪ ತನ್ನ ರೌಡಿಸಂ ಬಿಟ್ಟು ಸೊಪ್ಪು-ತರಕಾರಿ ಬೆಳೆಯತೊಡಗುತ್ತಾನೆ.

‘ನಾರಾಣಪ್ಪನ ಒಬ್ಬೇ ಮಗಳು. ಮಾರಾಣಿ ಅಂಗೆ ಬಾಳವ್ವ’ ಎಂದು ಅನೇಕ ಜನರು ಹರಸುವ ಮಾತುಗಳು ಕೃತಿಯುದ್ದಕ್ಕೂ ಕಾಣಿಸುತ್ತವೆ. ಆ ಮಾತುಗಳು, ಔಪಚಾರಿಕವಾಗಿರದೆ, ಲಲಿತಮ್ಮನವರು ಊರಿನ ಜನರೊಂದಿಗೆ ಹೊಂದಿದ್ದ ಒಡನಾಟದ ಆರ್ದ್ರತೆಯನ್ನು ಸೂಚಿಸುವಂತಿವೆ.

ಜೀವನಚರಿತ್ರೆಯ ರೂಪದಲ್ಲೂ ಓದಬಹುದಾದ ಈ ಕೃತಿಯಲ್ಲಿ, ಎರಡು ವಿಶಿಷ್ಟ ಪ್ರಸಂಗಗಳಿವೆ. ಒಂದು, ‘ನಿನ್ನನ್ನು ಮರೆಯಲಾದೀತೆ ಹುಸೇನಿ?’. ಇನ್ನೊಂದು, ‘ಹನ್ಸಾರ್ ಸಾಹೇಬರ ಹೆಂಡತಿ’. ಈ ಕಥನಗಳು, ಲಲಿತಮ್ಮನವರಿಗೆ ಸಂಬಂಧಿಸಿದ ಘಟನೆಗಳಾಗಿ ಮಾತ್ರವಲ್ಲದೆ, ಸಮಾಜ ಎಷ್ಟೆಲ್ಲ ಬದಲಾಗಿಹೋಯ್ತು ಎನ್ನುವ ವಿಷಾದವನ್ನು ವರ್ತಮಾನದಲ್ಲಿನ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ನಮ್ಮೊಳಗೆ ವಿಷಾದ ಮೂಡಿಸುವ ಬರಹಗಳಾಗಿವೆ. ಮುಸಲ್ಮಾನರ ಮನೆಗಳಿಗೆ ಬೆಂಕಿ ಬಿದ್ದಾಗ, ತನ್ನ ಮನೆಯನ್ನು ಕಳಕೊಂಡ ಹುಸೇನಜ್ಜನ ಕುರಿತು ಲೇಖಕಿ ಯೋಚಿಸುತ್ತ, ಆ ಹುಸೇನಿ ಊರಿನ ಎಲ್ಲರಿಗೂ ಯಾವ ರೀತಿಯಲ್ಲಿ ಬೇಕಾದವನಾಗಿದ್ದ ಎನ್ನುವುದನ್ನು ತುಂಬಾ ಆರ್ದ್ರವಾಗಿ ಚಿತ್ರಿಸುತ್ತಾರೆ. ಮನೆಯಿಂದ ಹೊರಗೆ ಬಾರದ ಹನ್ಸಾರ್ ಸಾಹೇಬರ ಪತ್ನಿಗೆ, ‘ನಾರ್ಣಪ್ಪನ ಮಗ್ಳು ಚೆಂದಾಗವಳಂತೆ. ನೋಡಬೇಕು’ ಎನ್ನುವ ಆಸೆ. ಲಲಿತಮ್ಮ ಅವರ ಮನೆಗೆ ಹೋದಾಗ, ಪ್ರೀತಿಯಿಂದ ಉಪಚರಿಸುವ ಅವರು, ‘ನಾನು ನಿಮ್ಮನ್ನು ಮುಟ್ಟಬಹುದಾ?’ ಎಂದು ಕೇಳ್ತಾರೆ. ‘ನಂಗೆ ಹೆಣ್ಣುಮಕ್ಕಳಿಲ್ಲ. ಹೆಣ್ಣುಮಕ್ಕಳೆಂದರೆ ಭಾಳಾ ಆಸೆ’ ಎನ್ನುತ್ತಾರೆ. ಮುಟ್ಟಬೇಕು ಎನ್ನುವ ಆಸೆ, ಮುಟ್ಟಿಸಿಕೊಳ್ಳುವ ಮಾನವೀಯ ನಡವಳಿಕೆ ಈ ಬರಹ



ನಮ್ಮೊಳಗೆ ಸೂಕ್ಷ್ಮ ತರಂಗಗಳನ್ನು ಹುಟ್ಟಿಸುವಂತಿದೆ.

ಕೃತಿಯ ಎರಡನೇ ಭಾಗದಲ್ಲಿ ಲಲಿತಮ್ಮನವರ ಒಡನಾಟಕ್ಕೆ ಬಂದ ಸಾಹಿತ್ಯ ಕ್ಷೇತ್ರದ ಪ್ರಸಿದ್ಧರ ಕುರಿತ ಚಿತ್ರಗಳಿವೆ. ಎಚ್.ಎಸ್. ಪಾರ್ವತಿ, ಶಾಂತಾದೇವಿ ಮಾಳವಾಡ, ಎಂ. ಕೆ. ಇಂದಿರಾ, ತರಾಸು, ಕಯ್ಯಾರರು, ಗೊರೂರು, ತ.ಸು.ಶಾಮರಾಯರು, ವಿ. ಸೀತಾರಾಮಯ್ಯನವರು, ನಿಟ್ಟೂರು, ಅನುಪಮಾ ನಿರಂಜನ, ವಿಜಯಾ ದಬ್ಬೆ, ಮಾಸ್ತಿ, ಕಾರಂತರು, ಬೇಂದ್ರೆ, ಕುವೆಂಪು – ಹೀಗೆ ಅನೇಕರ ಬಗ್ಗೆ ನೆನಪುಗಳಿವೆ. ಲಲಿತಮ್ಮನವರ ಸಾಹಿತ್ಯ ಪರಿಚಾರಿಕೆಯ ಕೆಲವು ಘಟನೆಗಳನ್ನು ಈ ಬರಹಗಳು ಕಟ್ಟಿಕೊಡುತ್ತವೆ. ಈ ನೆನಪುಗಳು, ಕನ್ನಡ ಸಾಹಿತ್ಯ ಪರಂಪರೆಯ ವಾತ್ಸಲ್ಯಗುಣವನ್ನು ಕಾಣಿಸುವಂತಹವು.

ಶಿವರಾಮ ಕಾರಂತರ ಬಗೆಗಿನ ಲೇಖನದಲ್ಲಿ ಎರಡು ಸಂಗತಿಗಳು ಗಮನಸೆಳೆಯುತ್ತವೆ. ಹರಿಹರಕ್ಕೆ ಬಂದಾಗ, ಹರಿಹರೇಶ್ವರ ದೇಗುಲಕ್ಕೆ ಹೋಗೋಣ ಬನ್ನಿ ಎಂದು ಲಲಿತಮ್ಮನವರು ಕಾರಂತರನ್ನು ಕರೆಯುತ್ತಾರೆ. ‘ದೇವರಿಗೆ ಈ ವೇಳೆಗೆ ಅಲಂಕಾರ ಆಗಿರುತ್ತದೆಯೆ?’ ಎನ್ನುವ ಕಾರಂತರ ಪ್ರಶ್ನೆಗೆ, ಹೌದು ಎಂದು